# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 673
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 13-12-2024
ಉತ್ತರಿಸುವ ಸಚಿವರು : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಯಾವೆಲ್ಲ ಕಲಾ ಪ್ರಕಾರಗಳನ್ನು ಗುರುತಿಸಿ ದಾಖಲೀಕರಣ ಮಾಡಲು ಕ್ರಮವಹಿಸಿದೆ; | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಡಿ ಹಲವು ಅಕಾಡೆಮಿಗಳು ಕಾರ್ಯನಿರ್ವಹಿಸುತ್ತಿದ್ದು, ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವತಿಯಿಂದ ಕಲ್ಲು, ಮರ, ಸಿಮೆಂಟ್, ಕಂಚು, ಫೈಬರ್ ಮುಂತಾದ ಮಾಧ್ಯಮಗಳಲ್ಲಿ ಸಾಂಪ್ರದಾಯಿಕ, ಸಮಕಾಲೀನ ಕಲೆಗಳ ಬಗ್ಗೆ ಹಾಗೂ ಹಿರಿಯ ಶಿಲ್ಪಕಲಾವಿದರ ಕುರಿತು ದಾಖಲೀಕರಣ ಮಾಡಲಾಗಿದೆ.<br><br>ಕರ್ನಾಟಕ ಲಲಿತಕಲಾ ಅಕಾಡೆಮಿಯ ವತಿಯಿಂದ ಭಿತ್ತಿಚಿತ್ರ, ಸಾಂಪ್ರದಾಯಿಕ, ಸಮಕಾಲೀನ ಕಲೆಗಳ ಬಗ್ಗೆ ಹಾಗೂ ಹಿರಿಯ ಚಿತ್ರ ಕಲಾವಿದರ ಕುರಿತು ವ್ಯಕ್ತಿ ಚಿತ್ರಗಳನ್ನು ದಾಖಲೀಕರಣ ಮಾಡಲಾಗಿದೆ.<br><br>ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ವತಿಯಿಂದ ನೃತ್ಯ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ ಮುಂತಾದ ಕಲೆಗಳು ಮತ್ತು ಕಲಾವಿದರ ಕುರಿತು ದಾಖಲೀಕರಣ ಮಾಡಲಾಗಿದೆ.<br><br>ಕರ್ನಾಟಕ ಜಾನಪದ ಅಕಾಡೆಮಿಯ ವತಿಯಿಂದ ವಿವಿಧ ಜಾನಪದ ಕಲಾಪ್ರಕಾರಗಳಾದ ಚೌಡಿಕೆ, ವೀರಗಾಸೆ, ತಮಟೆ, ಹಗಲುವೇಷ, ಗೊಂಡರ ಢಕ್ಕೆ ಮುಂತಾದ ಕಲೆಗಳು ಮತ್ತು ಕಲಾವಿದರ ಕುರಿತು ದಾಖಲೀಕರಣ ಮಾಡಲಾಗಿದೆ.<br><br>ಕರ್ನಾಟಕ ಯಕ್ಷಗಾನ ಅಕಾಡೆಮಿಯ ವತಿಯಿಂದ ಪಡುವಲಪಾಯ, ಬಡಗುತಿಟ್ಟು ಕಲಾ ಪ್ರಕಾರಗಳು ಮತ್ತು ಕಲಾವಿದರ ಕುರಿತು ದಾಖಲೀಕರಣ ಮಾಡಲಾಗಿದೆ. |
| ಆ) | ರಾಜ್ಯದಲ್ಲಿರುವ ಎಲ್ಲಾ ಕಲಾಪ್ರಕಾರಗಳಿಗೆ ಇಲಾಖೆಯ ಮೂಲಕ ಕಲೆಯ ಉಳಿವು, ಉನ್ನತೀಕರಣ ಮತ್ತು ದಾಖಲೀಕರಣಕ್ಕೆ ಆರ್ಥಿಕ ಧನಸಹಾಯ ಮತ್ತು ವಾರ್ಷಿಕ ಅನುದಾನ ನೀಡಲು ಇಲಾಖೆಯ ಕ್ರಿಯಾ ಯೋಜನೆಯಲ್ಲಿ ಅಳವಡಿಸಲು ಅನುದಾನ ಹಂಚಿಕೆ ಮಾಡಲಾಗಿದೆಯೇ; | ಹೌದು,<br><br>2024-25 ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಸಂಘ ಸಂಸ್ಥೆಗಳ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಾಮಾನ್ಯ ಯೋಜನೆಯಡಿ ರೂ.10.00 ಕೋಟಿ; ಪರಿಶಿಷ್ಟ ಜಾತಿ ಉಪಯೋಜನೆಯಡಿ ರೂ.10.00 ಕೋಟಿ; ಪರಿಶಿಷ್ಟ ಪಂಗಡ ಉಪಯೋಜನೆಯಡಿ ರೂ.3.00 ಕೋಟಿ; ಸಂಘ ಸಂಸ್ಥೆಗಳು ಆಯೋಜಿಸುವ ಕಾರ್ಯಕ್ರಮಗಳಿಗೆ ಪ್ರಾಯೋಜನೆ ಅಡಿಯಲ್ಲಿ ರೂ.10.00 ಕೋಟಿ; ರಾಜ್ಯ ಮತ್ತು ಜಿಲ್ಲಾ ಉತ್ಸವಗಳ ಆಚರಣೆಗೆ ರೂ.18.00 ಕೋಟಿ; ಹಾಗೂ ವೃತ್ತಿ ನಾಟಕ ಕಂಪನಿಗಳಿಗೆ ಪ್ರೋತ್ಸಾಹ ನೀಡಲು ಕಾಯಕಲ್ಪ ಯೋಜನೆಯಡಿ ರೂ.2.00 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಿಕೊಳ್ಳಲಾಗಿರುತ್ತದೆ. |

......2

| | | |
|---|---|---|
| ಇ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಯಕ್ಷಗಾನ, ನಾಟಕ ಸಹಿತ ಹಲವು ಕಲಾ ಪ್ರಕಾರಗಳಿದ್ದು, ಅವುಗಳಲ್ಲಿ ಕೆಲಸ ನಿರ್ವಹಿಸಿ ನಿವೃತ್ತರಾಗಿರುವ, ಅನಾರೋಗ್ಯಪೀಡಿತ ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳಿಗೆ ಒಳಪಡದ ಕಲಾವಿದರಿಗೆ ಸರಕಾರ ಮಾಸಾಶನ ನೀಡಲು ಯಾವಾಗ ಕ್ರಮ ವಹಿಸಲಾಗುವುದು; | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 71 ಕಲಾವಿದರು ಮತ್ತು ಉಡುಪಿ ಜಿಲ್ಲೆಯಲ್ಲಿ 71 ಕಲಾವಿದರು ಮಾಸಾಶನ ಪಡೆಯುತ್ತಿದ್ದಾರೆ.<br><br>58 ವರ್ಷ ಮೇಲ್ಪಟ್ಟ ಮತ್ತು ರೂ.1.00 ಲಕ್ಷ ಆದಾಯ ಮಿತಿ ಹೊಂದಿರುವ ಹಾಗೂ 25 ವರ್ಷಗಳು ಕಲಾಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ನಿವೃತ್ತ ಕಲಾವಿದರು ಮಾಸಾಶನಕ್ಕೆ ಆಯಾ ಜಿಲ್ಲೆಗಳ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಜಿಲ್ಲಾ ಸಹಾಯಕ ನಿರ್ದೇಶಕರು ಪರಿಶೀಲಿಸಿ, ಸೂಕ್ತ ಶಿಫಾರಸ್ಸಿನೊಂದಿಗೆ ಸಂಬಂಧಪಟ್ಟ ಅಕಾಡೆಮಿಗಳಿಗೆ ಅರ್ಜಿಗಳನ್ನು ಕಳುಹಿಸಿಕೊಡುತ್ತಾರೆ.<br><br>ಎಲ್ಲಾ ಅಕಾಡೆಮಿಗಳು ತಮ್ಮಲ್ಲಿ ಸ್ವೀಕೃತವಾದ ಅರ್ಜಿಗಳಿಗೆ ಸಂಬಂಧಿಸಿದ ನಿವೃತ್ತ ಕಲಾವಿದರನ್ನು ಸಂದರ್ಶನ ಮಾಡುವ ಮುಖಾಂತರ ಅರ್ಹ ಕಲಾವಿದರನ್ನು ಗುರುತಿಸಿ, ನಿರ್ದೇಶನಾಲಯಕ್ಕೆ ಶಿಫಾರಸ್ಸು ಮಾಡುತ್ತವೆ. ತದನಂತರ ರಾಜ್ಯಮಟ್ಟದ ಆಯ್ಕೆ ಸಮಿತಿಯಲ್ಲಿ ಅರ್ಹ ಕಲಾವಿದರನ್ನು ಅಂತಿಮಗೊಳಿಸಲಾಗುತ್ತದೆ.<br><br>ಸಮಿತಿಯು ಶಿಫಾರಸ್ಸು ಮಾಡಿದ ನಿವೃತ್ತ ಕಲಾವಿದರ ಪ್ರಸ್ತಾವನೆಯನ್ನು ಇಲಾಖಾ ನಿರ್ದೇಶಕರು ಮಂಜೂರಾತಿಗಾಗಿ ಸರ್ಕಾರಕ್ಕೆ ಸಲ್ಲಿಸುತ್ತಾರೆ. ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಆದೇಶ ಹೊರಡಿಸುತ್ತದೆ. ನಂತರ ನಿವೃತ್ತ ಕಲಾವಿದರಿಗೆ ಇಲಾಖಾ ವತಿಯಿಂದ ಪ್ರತಿ ತಿಂಗಳು ರೂ. 2,000/-ಗಳ ಮಾಸಾಶನ ನೀಡಲಾಗುತ್ತದೆ. |
| ಈ) | ಕರಾವಳಿ ಜಿಲ್ಲೆಗಳಲ್ಲಿ ಹಲವಾರು ನಿವೃತ್ತ ಕಲಾವಿದರಿಗೆ ಸರಕಾರದ ಮಾಸಾಶನ ಅಲಭ್ಯತೆಯ ಕಾರಣ ಕೆಲವು ಖಾಸಗಿ ಪ್ರತಿಷ್ಠಾನಗಳ ಮೂಲಕ ಅಲ್ಪ ಪ್ರಮಾಣದ ಆರ್ಥಿಕ ಸಹಾಯ ಒದಗಿಸುತ್ತಿದ್ದು, ಈ ಅರ್ಹ ಕಲಾವಿದರ ಸಮೀಕ್ಷೆ ನಡೆಸಿ ಇಲಾಖೆಯಿಂದಲೇ ಮಾಸಾಶನ ನೀಡಲು ಸರಕಾರ ಹೇಗೆ ಕ್ರಮವಹಿಸುತ್ತಿದೆ? | |

ಸಂಖ್ಯೆ: ಕಸಂವಾ 64 ಕವಿಸ 2024.

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.